Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩—೪—೦.

ಸಂಪುಟ ೨೬ | ಫಾರೀಕು ೧೩—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೦

ಪಾನ ನಿರೋಧವನ್ನು ಜಾರಿಗೆ ತರಬೇಕು..

ಬತ್ತದ ಬೆಲೆಯನ್ನು ಗಾಡಿಗೆ ರೂ. ೧೫೦ಕ್ಕೆ ಏರಿಸಬೇಕು.

ಕೊಡಗು ನ್ಯಾಯವಿಧಾಯಕ ಸಭೆ.

ಕೊಡಗು ನ್ಯಾಯವಿಧಾಯಕ ಸಭೆಯ ವಿಂಟಿಂಗು ತಾ. 9–10–44 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಪ್ರೆಸಿಡೆಂಟರಾದ ದಿ. ಬ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ. ಜಿ. ಐಯ್ಯಪ್ಪನವರು ಮತ್ತು ಫಾರೆಸ್ಟ್ ಇಲಾಖಾ ಮೆಂಬರರು ಗೈರ್‌ಹಾಜರಾಗಿದ್ದರು. ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ವಿಂಟಿಂಗು ಪ್ರಾರಂಭವಾಯಿತು. ಅಧ್ಯಕ್ಷರು ತಮ್ಮ ಪ್ರಥಮ ಭಾಷಣದಲ್ಲಿ ಹೀಗೆ ಹೇಳಿದರು.

'ಕೊಡಗಿನಲ್ಲಿ ಉಳುವರಿಯಿರುವ ಭೂಮಿಗಾ 13 ಲಕ್ಷ ರೂಪಾಯಿಗಳಲ್ಲಿ ಕತ್ತು ಲಕ್ಷ ರೂಪಾಯಿಗಳನ್ನು ಶೇಕಡ 2 ರ ಬಡ್ಡಿಯಂತೆ ಕೇಂದ್ರ ಸರಕಾರದಲ್ಲಿ ಇಡಲಾಗಿದೆ. ಈ ಹಣವು ಯುದ್ಧಾನಂತರದ ಪುನರ್ರಚನೆಗೆ ನಮಗೆ ನೇಕಾಗುವದು. ಈಗ ನಮ್ಮಲ್ಲಿ ಉಳಿಕೆ 3 ಲಕ್ಷ ರೂಪಾಯಿಗಳಿವೆ. ಯುದ್ಧಾನಂತರದಲ್ಲಿ ಕೊಡಗಿನ ಪುರೋಭಿವೃದ್ಧಿಯ ಬಗ್ಗೆ ಹಲವು ಯೋಜನೆಗಳನ್ನು ಮಾಡಬೇಕಿದೆ. ಇವಕ್ಕೊಂದು ಪುನರ್ರಚನಾ ಸಮಿತಿಯನ್ನು ನೇಮಿಸಲಾಗಿದೆ. ಕೊಡಗಿನಿಂದ ಮೀಲಿಟರಿಗೆ ಸೇರಿದವರ ಜನಸಂಖ್ಯೆ 3000 ದಿಂದ 4000 ದ ವರೆಗೆ ಇದೆ. ಯುದ್ಧಾನಂತರ ಇವರುಗಳಿಗೆ ಯೋಗ್ಯ ಉದ್ಯೋಗ ಕೊಡುವದು ಕಷ್ಟದ ಕೆಲಸವಾಗಿದೆ. ಆದ್ದರಿಂದ ಕೊಡಗಿನಲ್ಲಿಯ ಬಸ್ ಕಂಪೆನಿಗಳನ್ನು ಸರಕಾರದ ಅಧೀನಕ್ಕೆ ತೆಗೆದುಕೊಳ್ಳಲಾಗುವದು. ಈ ದೃಷ್ಟಿಯಿಂದಲೇ ಟ್ರಾವಂಕೂರಿನ ವಹಿವಾಟು ಏರ್ಪಾಡುಗಳನ್ನು ಅಭ್ಯಸಿಸಿ ಬರಲು ಪೊಲೀಸ್ ಇನ್ಸ್‌ಪೆಕ್ಟರೊಬ್ಬರನ್ನು ಟ್ರಾವಂಕೂರಿಗೆ ಕಳುಹಿಸಲಾಗಿತ್ತು. ಅಲ್ಲಿಯ ಮಲೇರಿಯಾ ನಿವಾರಣೆಗೆ ತಕ್ಕ ಯೋಜನೆ ಮಾಡಲು ಇಂಡಿಯಾದ ಮಲೇರಿಯಾ ಸಂಸ್ಥೆಯೊಡನೆ ರಾಸ್ ಇನ್‌ಸ್ಟಿಟ್ಯೂಟಿನ ಪ್ರವೀಣರ ಸಲಹೆ ಕೇಳಲಾಗಿದೆ. ಕೊಡಗಿನಲ್ಲಿ ವಿದ್ಯುಚ್ಛಕ್ತಿ ಶಕ್ತಿಯನ್ನು ಉತ್ಪಾದಿಸುವ ಯೋಜನೆಯನ್ನು ಕೈಕೊಳ್ಳಲಾಗುವದು. ಇದಕ್ಕೆ ಸುಮಾರು ಲಕ್ಷ ರೂಪಾಯಿಗಳಾದರೂ ಬೇಕು. ಈ ಬಗ್ಗೆ ಪರಿಶೋಧಿಸಿ ವರದಿ ಮಾಡಲು ಮದ್ರಾಸ್ ಸರಕಾರದಿಂದ ಎಗ್ಸಿಕ್ಯೂಟಿವ್ ಇಂಜಿನೀಯರೊಬ್ಬರನ್ನು ಕರೆಸುವ ಏರ್ಪಾಡಾಗಿದೆ. ವಿದ್ಯುಚ್ಛಕ್ತಿಯ ಅಭಿವೃದ್ಧಿಯಿಂದ ಕೊಡಗಿನಲ್ಲಿ ನಾನಾರೀತಿಯ ಕೈಗಾರಿಕೆಗಳ ಸ್ಥಾಪನೆಯು ಸುಲಭವಾಗಬಹುದು. ಕೊಡಗಿನಲ್ಲಿ ಕಿತ್ತಳೆ ರಸತೆಗೆಯುವ ಕೈಗಾರಿಕೆಯ ಬಗ್ಗೆ ಒಬ್ಬರನ್ನು ಲೈಲಪುರ, ಬೊಂಬಾಯಿಯ ಮದ್ರಾಸಿಗೆ ತರಬೇತಿಗೆ ಕಳುಹಿಸಲಾಗುವದು. ಕೊಡಗು ಪ್ರಾಮುಖ್ಯವಾಗಿ ಕೃಷಿಕರ ನಾಡು. ಇಂಥಾ ನಾಡಿನ ಅಭಿವೃದ್ಧಿಯು ಪ್ರಾಮುಖ್ಯವಾಗಿ ವಹಿವಾಟಿನ ಮೇಲೆ ಹೊಂದಿಕೊಂಡಿದೆ. ಆದ್ದರಿಂದ ಈ ವಹಿವಾಟು ಸೌಕರ್ಯವನ್ನು ಹೆಚ್ಚಿಸುವದು ಯುದ್ಧಾನಂತರದ ಪುನರ್ರಚನಾ ಯೋಜನೆಯಲ್ಲಿ ಅಡಕವಾಗುವದು. ಕೊಡಗಿನಲ್ಲಿ ಒಟ್ಟು 68,000 ಟನ್ ಬತ್ತ ಬೆಳೆಯುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 42,000 ಟನ್ ಬತ್ತವು ಕೊಡಗಿನ ನಿವಾಸಿಗಳ ಉಪಯೋಗಕ್ಕೆ ಬೇಕು. ಉಳಿದ 26,000 ಟನ್ನುಗಳನ್ನು ಹೊರಗೆ ಕಳುಹಿಸಬಹುದು. ಕಳೆದ ವರ್ಷ ಮೈಸೂರಿಗೆ 15,000 ಟನ್ನುಗಳನ್ನೂ ಮಲಬಾರಿಗೆ 9000 ಟನ್ನುಗಳನ್ನು ಕಳುಹಿಸುವ ಏರ್ಪಾಡು ಮಾಡಲಾಗಿತ್ತು. ಅದರಲ್ಲಿ ಮೈಸೂರಿಗೆ 14,000 ಟನ್ನುಗಳನ್ನೂ ಮಲಬಾರಿಗೆ 8900 ಟನ್ನುಗಳನ್ನೂ ಕೊಡಲಾಗಿದೆ. ಈ ವರ್ಷ ಕೊಡಗಿನಲ್ಲಿ ಮಳೆ ಸರಿಯಾಗಿ ಇಲ್ಲದೆ, ದನಕರುಗಳ ಖಾಯಿಲೆ, ಆಳುಗಳ ಅಭಾವ ಮೊದಲಾದ ತೊಂದರೆಗಳಿಂದ ಕೊಡಗಿನ ವ್ಯವಸಾಯವು ಸಂಪೂರ್ಣ 1000 ಏಕ್ರೆಗಳಷ್ಟು ಕಡಿಮೆಯಾಗಿರಬಹುದು. ಇನ್ನಾದರೂ ಮಳೆ ಸರಿಯಾಗಿ ನಡೆದರೆ ದೇಶಕ್ಕೆ ಬೇಕಷ್ಟು ಬತ್ತವು ಬೆಳೆಯುವದಲ್ಲದೆ ಆಲ್ಪ ಸ್ವಲ್ಪ ಹೊರಗೆ ಕೊಡಲೂ ಉಳಿಯಬಹುದು. ಬರುವ ವರ್ಷ ಬತ್ತದ ಬೆಲೆಯನ್ನು ಗಾಡಿಗೆ ರೂ. 150 ಕ್ಕೆ ಏರಿಸಬೇಕೆಂದು ಸಾರ್ವಜನಿಕ ಅಭಿಪ್ರಾಯವಿದೆ. ಬತ್ತಕ್ಕೆ ಯೋಗ್ಯ ಬೆಲೆ ದೊರೆಯುವಂತೆ ಮಾಡಲು ನಾನು ಪ್ರಯತ್ನಿಸುವೆನು. ಆದರೆ ತೊಂದರೆಯಲ್ಲಿರುವ ಪ್ರಾಂತಗಳ ಕಷ್ಟವನ್ನು ನಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುವದು ಯುಕ್ತವಲ್ಲ. ದೇಶದಲ್ಲಿ ಹೆಚ್ಚಿಗೆ ಬೆಳೆ ಬೆಳೆಸುವ ಯೋಜನೆಯನ್ನು ಬಲವತ್ತರವಾಗಿ ಸಾಗಿಸಬೇಕಿದೆ. ಬೆಳೆಯುವವರ ಅನುಕೂಲತೆಗಾಗಿ ಅರ್ಧ ಬೆಲೆಯಲ್ಲಿ ಗ್ರೋಬ್ಯರ್ ಮೊದಲಾದುವನ್ನು ಸರಬರಾಯಿ ಮಾಡುವೆವು. ಗೋದಿಯ ಸಾಮಾನು, ಆಡು ಕುರಿಗಳ ಸರಬರಾಯಿ ಮುಂದೆ ಸುಧಾರಿಸಬಹುದು. ಕೊಡಗಿಗೆ ಕಾಗದ ಸರಬರಾಯಿಯಲು ಜೆನ್ನಾಗಿಲ್ಲ. ಈ ವರ್ಷ ಮದ್ರಾಸು ಸರಕಾರದ ಮೂಲಕ ನನಗೆ 30 ಟನ್ ಕಾಗದ ದೊರೆಯುವ ಸಾಧ್ಯತೆಯಿದೆ. ಹೈಸ್ಕೂಲು ಮತ್ತು ಕಾಲೇಜುಗಳ ವಿಷಯ ಯುದ್ಧಾನಂತರ ತೆಗೆದುಕೊಳ್ಳಲಾಗುವದು.' ಎಂದು ಹೇಳಿದರು.

ನಂತರ ಪ್ರಶ್ನೋತ್ತರಗಳು ನಡೆದವು. 21 ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟವು. ಸೆಕ್ರೆಟರಿಯವರು ಕಳೆದ ವಿಂಟಿಂಗಿನ ತೀರ್ಮಾನದ ಮೇಲೆ ಚೀಫ್ ಕಮಿಷನರ ಹುಕುವನ್ನು ಸಭೆಯ ಮುಂದಿಟ್ಟರು.

ಠರಾವುಗಳು.

(1) 'ಯೋಗ್ಯ ಬೆಲೆಗೆ ಉಳುವ ಎತ್ತುಗಳ ಮತ್ತು ಕರಿಯುವ ಹಸಗಳ ಸರಬರಾಯಿ ಬಗ್ಯೆ ತಕ್ಕ ಏರ್ಪಾಡುಗಳನ್ನು ಮೈಸೂರು ಸರಕಾರದೊಡನೆ ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ' ಈ ಠರಾವನ್ನು ಶ್ರೀ. ನಿಡ್ಡಿಮಲೆ ಸೋಮಣ್ಣನವರು ಸಭೆಯ ಮುಂದಿಟ್ಟು ಈಗಿರುವ ಕಷ್ಟ ಮತ್ತು ಬೆಲೆಯನ್ನು ವಿವರಿಸಿದರು. ಖಾ. ಸಾ. ಅಬ್ದುಲ್ ರಹಮಾನ್‌ಖಾನರು ಅನುಮೋದಿಸಿದರು. ಮೈಸೂರು ಸರಕಾರಕ್ಕೆ ದನಗಳ ಕೊರತೆಯಿದೆಯೆಂದೂ, ಹೇಗಾದರೂ ಆವರ ಕೃಪೆಯಿಂದ ಕೆಲವಾದರೂ ದನಗಳು ಈಗ ಹುರುತ್ತಿರುವದಾಗಿದೆಯೆಂದೂ ಒತ್ತಾಯಮಾಡುವದು ಸಾಧ್ಯವಿಲ್ಲ ಮತ್ತು ಪ್ರಯೋಜನಕಾರಿಯಲ್ಲವೆಂದು ಫೈನಾನ್ಸ್ ಮೆಂಬರರು ಹೇಳಿದರು. ಚರ್ಚೆಯ ನಂತರ ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರರು ಠರಾವಿನ ಪರ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

(2) 'ಕಾನ್ಸಿಲ್ ಹಾಲ್‌ನಲ್ಲಿ ಮಾತಾಡುವದು ಎಲ್ಲರಿಗೂ ಸರಿಯಾಗಿ ಕೇಳಿದ ಕಾರಣ ಒಂದೆ ಧ್ವನಿವರ್ಧಕ ಯಂತ್ರವನ್ನೂ ಅದಕ್ಕೆ ಸಂಬಂಧಿಸಿ ಲೌಡ್ ಸ್ಪೀಕರುಗಳನ್ನೂ ಇಡಬೇಕೆಂಬ ಠರಾವನ್ನು ಮಿ. ಡಬ್ಲೂ ಹಾರ್ಸ್‌ನ್ಸ್ಟರವರು ಸೂಚಿಸಿದರು. ಈ ವಿಚಾರವು ಯುದ್ಧೋತ್ತರ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವದೆಂದ ಕಾರಣ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

(3) 'ಕಂದಾಯಕ್ಕೆ ಭೂಮಿ ಹರಾಜಾದಾಗ ಬಾಕಿ ಕಂದಾಯವನ್ನೂ, ಹರಾಜಾದ ಹಣದ 1/5 ಭಾಗವನ್ನೂ 30 ದಿನಗಳೊಳಗೆ ಪಾವತಿಮಾಡಿದರೆ ಠರಾವನ್ನು ಶ್ರೀ. ನಿಡ್ಡಿಮಲೆ ಸೋಮಣ್ಣನವರು ಸೂಚಿಸಿದರು. ಶ್ರೀ ಸಿ. ಎಂ. ಭೀಮಯ್ಯನವರು ಅನುಮೋದಿಸಿದರು. ಕಂದಾಯವನ್ನು ಪಾವತಿಮಾಡಲಾರದ ರೈತನು ಹರಾಜು ಹಣದ 5ನೇ ಒಂದು ಭಾಗವನ್ನೆನ್ನೆ ಕಟ್ಟಬೇಕೆಂಬುದು ಅನ್ಯಾಯವೆಂದು ಫೈನಾನ್ಸ್ ಮೆಂಬರರು ವಿರೋಧಿಸಿದರು. ಓಟಿಗೆ ಹಾಕಲಾಗಿ ಶ್ರೀಗಳಾದ ಎನ್. ಸೋಮಣ್ಣ, ರಾಮಮೂರ್ತಿ, ಬಿ. ಎ. ಬೆಳ್ಯಪ್ಪ, ಎಚ್. ಅಣ್ಣಯ್ಯ, ಎಸ್. ಮೂದಪ್ಪ, ಪಿ. ಪುಪ್ಪಣ್ಣ, ಜೆ. ಎ. ಮೂದಪ್ಪ, ಎ. ಎಸ್. ಪೊನ್ನಪ್ಪ, ಪಿ. ಪಿ. ಕಾರ್ಯಪ್ಪ ಇವರುಗಳ ಪರವಾಗಿ ಓಟು ಮಾಡಿದುದರಿಂದ ಠರಾವು ಪಾಸಾಯಿತು.

(4) 'ಕೊಡಗಿನಿಂದ ಹೊರಗೆ ಕಾಲೇಜು ವ್ಯಾಸಂಗಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಸೀಟು ದೊರೆಯಲು ಇರುವ ಕಷ್ಟವನ್ನು ಮತ್ತು ವಿಜ್ಞಾನ ಶಾಸ್ತ್ರ ಕಲಿಯುವವರಿಗೆ ಇರುವ ತೊಂದರೆಯನ್ನೂ ಅನುಲಕ್ಷಿಸಿ ಕೊಡಗಿನಲ್ಲಿ ಒಂದು ಕಾಲೇಜು ಸ್ಥಾಪಿಸಲಿಕ್ಕಾಗಿ ಕೇಂದ್ರ ಸರಕಾರದಿಂದ 5 ಲಕ್ಷ ರೂಪಾಯಿಗಳ ವಂತಿಗೆಯನ್ನು ಕೇಳಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಶ್ರೀ. ಕೋಳೆರ ಕರುಂಬಯ್ಯನವರು ಠರಾವನ್ನು ಸೂಚಿಸಿ ಕಾಲೇಜಿನ ಅವಶ್ಯಕತೆ, ಈಗಿರುವ ತೊಂದರೆಗಳನ್ನು ವಿವರಿಸಿದರು. ಶ್ರೀ. ಎ. ಎಸ್. ಪೊನ್ನಪ್ಪನವರು ಅನುಮೋದಿಸಿದರು. ವಿದ್ಯಾ ಇಲಾಖಾ ಸದಸ್ಯರು ಯುದ್ಧಾನಂತರ ಇದನ್ನು ಆಲೋಚಿಸಬಹುದೆಂದೂ ಹೇಳಿದರು. ಓಟಿಗೆ ಹಾಕಲಾಗಿ ಶ್ರೀ. ಕೆ. ಪಿ. ಕರುಂಬಯ್ಯ, ಸಿ. ಎಂ. ಭೀಮಯ್ಯ ಮತ್ತು ಕಾಂಗ್ರೆಸ್ ಸದಸ್ಯರು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

(5) 'ಮಡಿಕೇರಿ ಸಿವಿಲ್ ಆಸ್ಪತ್ರೆಗೆ ಒಬ್ಬ ಮೆಡಿಕಲ್ ಗ್ರಾಜ್ಯುಯೇಟರನ್ನು ನೇಮಿಸಲು ತಕ್ಕ ಏರ್ಪಾಡು ಮಾಡಬೇಕು' ಎಂಬ ಠರಾವನ್ನು ಶ್ರೀ. ನಿಡ್ಡಿಮಲೆ ಸೋಮಣ್ಣನವರು ಸೂಚಿಸಿದರು. ಶ್ರೀ. ಬಿ. ಎ. ಬೆಳ್ಯಪ್ಪನವರು ಅನುಮೋದಿಸಿದರು. ಈಗಿರುವ ಆ. ಸರ್ಜನರು ನಿವೃತ್ತರಾದೊಡನೆ ಮೆಡಿಕಲ್ ಗ್ರಾಜ್ಯುಯೇಟರನ್ನು ನೇಮಿಸಲಾಗುವದೆಂದು ಫೈನಾನ್ಸ್ ಮೆಂಬರರು ಭರವಸೆಯಿತ್ತ ಕಾರಣ ಠರಾವು ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

(6) 'ದನಗಳ ಕೈಯ, ಆಳುಗಳ ಕೂಲಿ, ಈ ವರ್ಷದ ದನಗಳ ಕಾಯಿಲೆಯಿಂದ ನಷ್ಟ, ಜೀವನದ ವಿಪರೀತ ಏರಿದ ಖರ್ಚು ಈ ಕಾರಣಗಳಿಂದ ರೈತರಿಗೆ ತೊಂದರೆಯಾಗಿರುವದರಿಂದ ಬತ್ತದ ಕ್ರಯವನ್ನು ಕಡಿಮೆ ಪಕ್ಷ ಗಾಡಿಗೆ ರೂ. 150 ಕ್ಕೆ ಏರಿಸಬೇಕು' ಎಂಬ ಠರಾವನ್ನು ಶ್ರೀ ಕೋಳೆರ ಕರುಂಬಯ್ಯನವರು ಸೂಚಿಸಿ ದನಗಳ ಬೆಲೆ, ಕೂಲಿ, ಆಳುಗಳ ಅಭಾವ, ದನಗಳ ಖಾಯಿಲೆ, ಜೀವನ ಖರ್ಚುಗಳನ್ನು ವಿವರಿಸಿದರು. ಶ್ರೀ. ಎಚ್. ಬಿ. ಅಣ್ಣಯ್ಯನವರು ಅನುಮೋದಿಸಿದರು. ಬತ್ತದ ಕ್ರಯವನ್ನು ಏರಿಸಿದರೆ ಅಕ್ಕಿಯನ್ನು ಕ್ರಯಕ್ಕೆ ಕೊಂಡು ತಿನ್ನುವವರಿಗೆ ಕಷ್ಟವಾಗುತ್ತದೆ, ಅಲ್ಲದೆ ಕೇಂದ್ರ ಸರಕಾರದಿಂದ ನಿಶ್ಚಯಿಸಲ್ಪಟ್ಟ ಈಗಿನ ರೂ. 115 ರ ಬೆಲೆಯನ್ನು ಬದಲಾಯಿಸುವದು ಸ್ಥಳೀಯ ಸರಕಾರಕ್ಕೆ ಸಾಧ್ಯವಿಲ್ಲ. ಆದರೂ ಸಹ ಬೆಳೆಸುವವರಿಗೂ, ಕೊಂಡುಕೊಳ್ಳುವವರಿಗೂ ಯೋಗ್ಯದರ ದೊರೆಯುಂತೆ ಮಾಡಲಾಗುವದೆಂದು ಫೈನಾನ್ಸ್ ಮೆಂಬರರು ಹೇಳಿದರು. ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಸದಸ್ಯರು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

(7) 'ಕೊಡಗಿನಲ್ಲಿ ಸಂಪೂರ್ಣ ಪಾನನಿರೋಧವನ್ನು 1945 ಏಪ್ರಿಲ್ ಒಂದರಿಂದ ಜಾರಿಗೆ ತರಬೇಕು' ಎಂಬ ಠರಾವನ್ನು ಶ್ರೀ ಎ. ಎಸ್. ರಾಮಮೂರ್ತಿಯವರು ಸೂಚಿಸಿದರು. ಶ್ರೀ. ಸಿಂಗೂರು ಮೂದಪ್ಪನವರು ಅನುಮೋದಿಸಿದರು. ಮದ್ರಾಸಿನಲ್ಲಿ ಇದು ಜಯಪ್ರದವಾಗಲಿಲ್ಲವೆಂದೂ ಕೊಡಗಿನಲ್ಲಿ ತಂದರೆ ಕಳ್ಳವ್ಯಾಪಾರ ಹೆಚ್ಚಾಗಿ ಅದನ್ನು ತಡೆಗಟ್ಟುವದು ಕಷ್ಟದ ಕೆಲಸವೆಂದೂ ಅಲ್ಲದೆ ಸರಕಾರಕ್ಕೆ ಈಗ ಬರುತ್ತಿರುವ ಈ ಬಾಬಿನ 4 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ಕಳಕೊಳ್ಳುವದು ಸಾಧ್ಯವಿಲ್ಲವೆಂದೂ ಫೈನಾನ್ಸ್ ಮೆಂಬರರು ವಿರೋಧಿಸಿದರು. ಓಟಿಗೆ ಹಾಕಲು ಠರಾವು ಪಾಸಾಯಿತು.

(8) 'ಅ. ಕಮಿಷನರು, ಎಗ್ಸಿಕ್ಯೂಟಿವ್, ಇಂಜಿನಿಯರು, ಎಗ್ರಿಕಲ್ಚರಲ್ ಆಫೀಸರು ಮತ್ತು ಮೂರು ಉದ್ಯೋಗಸ್ಥರಲ್ಲದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಿ ಕೊಡಗಿನಲ್ಲಿಯ ಸಣ್ಣ ದೊಡ್ಡ ನೀರಾವರಿ ಸಾಧ್ಯತೆಗಳನ್ನು ಪರಿಶೀಲಿಸಿ ಸೂಚನೆಯೊಡುವ ವಿಪರ್ಯಾಗಬೇಕು' ಎಂಬ ಠರಾವನ್ನು ಶ್ರೀ. ನಿಡ್ಡಮಲೆ ಸೋಮಣ್ಣನವರು ಸೂಚಿಸಿದರು. ಶ್ರೀ. ಎಸ್. ರಾಮಮೂರ್ತಿಯವರು ಅನುಮೋದಿಸಿದರು. ಯುದ್ಧೋತ್ತರ ಪುನರ್ರಚನಾ ಯೋಜನೆಯಲ್ಲಿ ಈ ವಿಚಾರ ತೆಗೆದುಕೊಳ್ಳಲ್ಪಡುವದೆಂದು ಫೈನಾನ್ಸ್ ಮೆಂಬರರು ಹೇಳಿದ್ದರಿಂದ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

3ನೇ ಪುಟ ನೋಡಿ)

ಕೊ ಡ ಗು

ಶಾ. ೧೩-೧೦-೧೯೪೪ನೇ ಶುಕ್ರವಾರ

ದಿವಂಗತ ಕೋದಂಡ ದೇವಯ್ಯನವರು.

'ತನ್ನ ಜನನ ಕಾಲಕ್ಕೆ ಜಳುತ್ತಾ ಬರುವ ಮನುಷ್ಯನು ಈ ಲೋಕವನ್ನು ಬಿಟ್ಟು ಹೋಗುವಾಗ ಸಹಸ್ರಾರು ಜನರು ಕಣ್ಣೀರು ಮಿಡಿಯುವಂತೆ ಮಾಡಿ ಹೋಗಬೇಕು. ಆತನೇ ಸತ್ಪುರುಷ, ಆತನೇ ಪುಣ್ಯಾತ್ಮ, ಆತನ ಜೀವನವೇ ಸಾರ್ಥಿಕ್ಯವನ್ನು ಪಡೆದುದು' ಈ ದೃಷ್ಟಿಯಿಂದ ದಿವಂಗತರಾದ ಕೋದಂಡ ದೇವಯ್ಯನವರು ತಮ್ಮ ಜೀವನವನ್ನು ಸಾರ್ಥಕಗೊಳಿಸಿದವರು. 1887 ರಲ್ಲಿ ಜನಿಸಿದ ಇವರು ಅದರ್ಶ ಗೃಹಸ್ಥರಾಗಿ ಸರ್ವ ರೀತಿಯ ಜನರಿಗೂ ಆಶ್ರಯದಾತರಾಗಿ ಬಾಳಿದರು. ದೀನದರಿದ್ರದ ಸೇವೆಗಾಗಿ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕೆಲಸಗಳಿಗಾಗಿ ತನ್ನ ಶಕ್ತಿಯಿಂದ ತ್ಯಾಗಮಾಡಿ ಪಾವನರಾದರು. ಅವರದು ಸಿರಿವಂತರ ದರ್ಪದ ಜೀವನವಲ್ಲ; ಜಗತ್ತಿಗೇ ಬೆನ್ನುಹಾಕಿ ಸ್ವಾರ್ಥದಲ್ಲಿ ಮಗ್ನವಾದ ಕುರುಡು ಜೀವನವೂ ಅಲ್ಲ. ಸರಳವಾದ, ವಾತ್ಸಲ್ಯಪೂರ್ಣವಾದ, ಪ್ರೇಮಮಯ ಜೀವನವದು. ಯೋಗಿಯಂತೆ ತ್ಯಾಗಮಾಡಿದ ಆರಾಧ್ಯಜೀವನವದು. ಅವರು ಬಡವ ಬಗ್ಗರಿಗಾಗಿ ಒಂದು ಲಕ್ಷಕ್ಕೂ ಮಿರಿ ಧನಸಹಾಯಮಾಡಿದ್ದಾರಂತೆ. ನೂರಾರು ಜನರಿಗೆ ವಿದ್ಯಾದಾನ ಮಾಡಿದ್ದಾರೆ. ವಿದ್ಯಾದಾನಕ್ಕಾಗಿ ಅವರ ಜೀವನವು ಮುಡಿಪಾಗಿತ್ತೆಂದರೂ ಸಲ್ಲುವದು. ಒಂದು ನೂತ, ಒಂದು ಕೋನೂ, ಒಂದು ಜಾತಿ ಎಂಬ ಬೇಧವಿಲ್ಲದೆ ಧರ್ಮವನ್ನು ಧರ್ಮಕ್ಕಾಗಿ ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದ ಈ ಮಹನೀಯರ ಜೀವನವು ಕೊಡಗಿನ ಶ್ರೀಮಂತರಿಗೆ ಒಂದು ಉದಾಹರಣೆಯಾಗಿ, ಜಗತ್ತನ್ನು ಅರಿಯದೆ ಮೆರೆಯುವ ದರ್ಪದ ಜನರಿಗೆ ಒಂದು ಅನುಕರಣೀಯ ಮಾದರಿಯಾಗಿ, ಹೀನ, ದೀನರಿಗೆ ಒಂದು ಜ್ಯೋತಿಯಾಗಿ ಬೆಳಗುತ್ತಿದೆ. ದಿವಂಗತರು ತಮ್ಮ ಪಾರ್ಥಿವವಾದ ಶರೀರವನ್ನು ತ್ಯಜಿಸಿದ್ದರೂ ಅವರ ನೂರಾರು ಉದಾತ್ತಕೃತಿಗಳಿಂದ ನಮ್ಮ ಮಧ್ಯೆ ಜೀವಂತ ಇದ್ದಾರೆ. ಅವರು ಮಾಡಿದ ಕಾರ್ಯಗಳ ಹೊಗಳಿಕೆಯಿಂದ ಪ್ರಯೋಜನವಿಲ್ಲ. ನಮ್ಮ ಹೊಗಳಿಕೆಗಳಿಗೆ ಬೆಲೆ ಬರಬೇಕಾದರೆ ಅವರ ನೆನಪಿಗಾಗಿ ನಾವು ಕಾರ್ಯತಃ ಏನಾದರೂ ಮಾಡಬೇಕು. ವಿದ್ಯಾದಾನಕ್ಕಾಗಿ ಮುಡಿಪಾಗಿದ್ದ ಶ್ರೀಯುತರ ಜೀವಕ್ಕೆ ಅಮರ ಶಾಂತಿ ದೊರೆಯುವ ಕೆಲಸವನ್ನು ನಾವು ಮಾಡಬೇಕು. ಅವರ ಹೆಸರಿನಲ್ಲಿ ಒಂದು ನಿಧಿಯನ್ನು ಸಂಗ್ರಹಿಸಿ ಅದರಿಂದ ಬರುವ ಬಡ್ಡಿಯನ್ನು ವಿದ್ಯೆಯಲ್ಲಿ ಅಭಿರುಚಿಯಿರುವ ಬಡಬಾಲಕರಿಗೆ ವಿದ್ಯಾರ್ಥಿವೇತನವಾಗಿ ಕೊಡುವ ಏರ್ಪಾಡು ಮಾಡಿದರೆ ನಾವು ನಮ್ಮ ಕರ್ತವ್ಯ ಮಾಡಿದಂತಾಗುವದು. ಆದ್ದರಿಂದ ಇಂಥಾ ಒಂದು ಸ್ಮಾರಕ ನಿಧಿಯನ್ನು ಸೇರಿಸಲ್ಪಡಲಿ. ಬಡ ಬಗ್ಗರ ಕಾಮಧೇನುವು ಆವ್ಯಶ್ಯವಾದರೂ ಅವರ ನೆನಹು ಚಿರಂತರವಿರುವಂತಾಗಲಿ. ದಿವಂಗತರ ಕುಟುಂಬಕ್ಕೆ ದುಃಖ್ಖಸಹನಶಕ್ತಿಯನ್ನು ಭಗವಂತನು ದಯಪಾಲಿಸಲಿ. ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ.

ಒಳದೇಶ.

ಚೀಫ್‌ಫುಡ್ ಕಂಟ್ರೋಲ್ ಇನ್ಸ್‌ಪೆಕ್ಟರರ ಹುದ್ದೆಯನ್ನು ವಜಾಮಾಡಿ ಶ್ರೀ ಕೆ. ಶ್ರೀನಿವಾಸರಾಯರನ್ನು ಉತ್ತರಕೊಡಗಿಗೂ, ಶ್ರೀ ಗುಡ್ಡಂಡ ಕಾರ್ಯಪ್ಪನವರನ್ನು ದಕ್ಷಿಣ ಕೊಡಗಿಗೂ ಹೆಚ್ಚಿಗೆ ಆಹಾರ ಬೆಳೆಸಲು ಪ್ರಚಾರಮಾಡುವ ಆಹಾರ ಆಫೀಸರುಗಳಾಗಿ ನೇಮಕಮಾಡಲಾಗಿದೆ. ಶ್ರೀ. ಚಿಟ್ಟಂಗಡ ನಾಣಯ್ಯನವರನ್ನು ವೀರಾಜಪೇಟೆಯ ಪಾರುಪತ್ಯಗಾರರಾಗಿಯೂ, ಶ್ರೀ ಚಂಡಿರ ಬೆಳ್ಯಪ್ಪನವರನ್ನು ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ, ಶ್ರೀ ಕೊಕ್ಕೇಂಗಡ ಬೆಳ್ಯಪ್ಪನವರನ್ನು ಕಂಟ್ರೋಲ್ ಇನ್ಸ್‌ಪೆಕ್ಟರಾಗಿಯೂ ನೇಮಕಮಾಡಲಾಗಿದೆ.

1944-45ರ ಫೈನಾನ್ಸು ಕಮಿಟಿಗೆ ಶ್ರೀಗಳಾದ ಐ. ಪಿ. ಕಾರ್ಯಪ್ಪ, ಬಿ ಎ. ಬೆಳ್ಯಪ್ಪ, ಮತ್ತು ಹಂಡ್ಲಿ ಪುಟ್ಟಣ್ಣನವರನ್ನು ಚುನಾಯಿಸಲಾಗಿದೆ.

ಕಳೆದ ಸೆಪ್ಟೆಂಬರಿನಲ್ಲಿ ನಡೆದ ಇಂಟರ್ ವಿಂಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ನೆಲ್ಲನುಕ್ಕಳ ಮುತ್ತಣ್ಣ, ಕಾಪ್ಪಂಡ ಕರುಂಬಯ್ಯ, ಕೀತಿಯಂಡ ಮುತ್ತಣ್ಣ, ಪಟ್ಟಮಾಡ ಮುತ್ತಣ್ಣ, ಚಿರಿಯಮಂಡ ಬೋಪಣ್ಣ, ಮನೆಯಪಂಡ ಮುತ್ತಣ್ಣ, ಇವರುಗಳು ತೇರ್ಗಡೆಯಾಗಿರುವರು. ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಮೂಡೆರ ತಮ್ಮಯ್ಯ, ಚಿಕ್ಕೇರ ಗಣಪತಿ ಇವರುಗಳು ಪಾಸಾಗಿರುವರು.

ಮಹಾತ್ಮ ಗಾಂಧಿಯವರ 76 ನೇ ಜನ್ಮದಿನೋತ್ಸವವನ್ನು ತಾ. 2-10-44 ರಲ್ಲಿ ಶನಿವಾರಸಂತೆಯಲ್ಲಿ, ಶ್ರೀ. ಜಿ. ಕೆ. ಚಂದ್ರಶೇಖರರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಪ್ರಭಾತಫೇರಿ ಬೆಳಿಗ್ಗೆ 6 ಗಂಟೆಗೆ ನಡೆಯಿತು. 10 ಗಂಟೆಗೆ ಮಹಾತ್ಮರ ಭಾವಚಿತ್ರ ಮೆರವಣಿಗೆ ಮಾಡಿ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಸಿ. ಮೂದಯ್ಯ, ಎಸ್. ಎನ್. ತಮ್ಮಯ್ಯ, ಬಿ. ಕೆ. ಶಾಂತುವೀರ ಮೊದಲಾದವರು ಗಾಂಧೀಜಿಯವರ ಗುಣಕಥನ ನೂಡಿದರು.

ಶನಿವಾರಸಂತೆಯ ಕಡೆ ಮಳೆಯಿಲ್ಲದೆ ತೊಂದರೆಯಾದ ಕಾರಣ ಸುಮಾರು 300 ರಷ್ಟು ಜನರು ಸೇರಿ ಮಲ್ಲೇಶ್ವರ ದೇವರ ಪೂಜೆಯನ್ನು ತಾ. 9ರಲ್ಲಿ ಮೂಡಿ ಮನೆಗೆ ಹಿಂತಿರುಗುವದರೊಳಗೆ ಮಳೆಹೊಡೆಯಿತೆಂದೂ ಇದರಿಂದ ವ್ಯವಸಾಯಗಾರರಿಗೆ ಸ್ವಲ್ಪ ತಿನುಕೂಲವಾಯಿತೆಂದೂ ತಿಳಿಯಬರುತ್ತದೆ.

ಪೊನ್ನಂಪೇಟೆಯ ಕುಶಾಲಪುರದಲ್ಲಿ ಗಾಂಧಿಜಯಂತಿಯನ್ನು ತಾ. 2-10-44 ರಲ್ಲಿ ಆಚರಿಸಲಾಯಿತು. ಶ್ರೀ. ಕೆ. ಸಿ. ಕರುಂಬಯ್ಯನವರು ಗಾಂಧೀಜಿಯವರ ಜೀವನ ವೈಶಿಷ್ಟ್ಯವನ್ನು ವಿವರಿಸಿದರು.

ತಾ. 5-10-44 ರಲ್ಲಿ ಅಮ್ಮತ್ತಿಯಲ್ಲಿ ಶ್ರೀ ಹಾತೂರು ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ವಕ್ಕಲಿಗರ ವಿದ್ಯಾಭಿವೃದ್ಧಿ ಸಂಘದ ಮಹಾಸಭೆಯಲ್ಲಿ ಬತ್ತದ ಬೆಲೆಯನ್ನು 120 ಪರೆಯು ಗಾಡಿಗೆ ರೂ. 150 ಕ್ಕಾದರೂ ಏರಿಸಬೇಕೆಂದು ತೀರ್ಮಾನಿಸಲಾಯಿತು.

ತಾ. 10-10-44ರಲ್ಲಿ ದಿವಂಗತರಾದ ಕೋದಂಡ ದೇವಯ್ಯನವರ ನಿಧನದ ಬಗ್ಗೆ ಸಂತಾಪ ವ್ಯಕ್ತಮಾಡಲು ದಿ. ಬ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ತಾ. 11-10-44ರಲ್ಲಿ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನೆರೆದು ದಿವಂಗತರ ಆತ್ಮಕ್ಕೆ ಶಾಂತಿಯನ್ನೂ, ಕುಟುಂಬಕ್ಕೆ ದುಃಖ ಸೈರಣಾ ಶಕ್ತಿಯನ್ನೂ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿದಲ್ಲದೆ ಮೃತರ ಜ್ಞಾಪಕಾರ್ಥವಾಗಿ ಒಂದು ನಿಧಿಯನ್ನು ಸಂಗ್ರಹಿಸಿ ಅದರ ಬಡ್ಡಿಯಿಂದ ಮಡಿಕೇರಿ, ವೀರಾಜಪೇಟೆ ಮತ್ತು ಕಾನ್ವೆಂಟು ಹೈಸ್ಕೂಲುಗಳಲ್ಲಿನ ಉತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವಂತೆ ತೀರ್ಮಾನಿಸಿ ಇವರನ್ನು ನಿಧಿ ಸಂಗ್ರಹ ಸಮಿತಿಯರನ್ನಾಗಿ ಆರಿಸಲ್ಪಟ್ಟಿತು. ದಿ. ಬ. ಕೆ. ಚಂಗಪ್ಪನವರು (ಪೋಷಕರು), ಶ್ರೀ ಗಳಾದ ಸಿ. ಎನ್. ವೆಂಕಪ್ಪಯ್ಯ (ಪ್ರೆಸಿಡೆಂಟ್), ಬಿ. ಎಸ್. ಕುಶಾಲಪ್ಪ, ಎನ್. ಸೋಮಣ್ಣ, ಪಿ. ಐ. ಬೆಳ್ಯಪ್ಪ, ಎಂ. ಎಸ್. ಸಿದ್ದೀಕ್, ಕೆ. ಪಿ. ಅಪ್ಪಯ್ಯ, ಪಿ. ಎಂ. ಉತ್ತಪ್ಪ, ಸಿ. ಡಿ. ಅಪ್ಪಯ್ಯ, ಎಸ್. ಬಸಪ್ಪ ಮತ್ತು ಪಿ. ಎಂ. ಚಂಗಪ್ಪ (ಸೆಕ್ರೆಟರಿ) ಇವರುಗಳು. ಅಲ್ಲದೆ ಮಡಿಕೇರಿ ಹೈಸ್ಕೂಲಿನಲ್ಲಿ ಇವರ ಭಾವಚಿತ್ರವನ್ನಿಡಲು ತೀರ್ಮಾನಿಸಲಾಯಿತು.

ಶ್ರೀ ಕಂಜಿತಂಡ ಕುಶಾಲಪ್ಪನವರ ಮಾತೋಶ್ರೀಯವರು ಕಳೆದ ತಾ. 30ರಲ್ಲಿ ನಿಧನ ಹೊಂದಿದರು.

ಕಸ್ತೂರ್ ಬಾ ನಿಧಿ.

ಎಪ್ಪತ್ತೈದು ಲಕ್ಷದ ನಿಧಿ ಸೇರಿಸಬೇಕೆಂದು ನಿಶ್ಚಯಿಸಿದ್ದ ಈ ಕಸ್ತೂರ್ ಬಾ ಸ್ಮಾರಕವು ನೂರಹನ್ನೆರಡು ಲಕ್ಷವನ್ನು ದಾಟಿದೆ. ಹೀಗೆ ಹದ್ದು ಮಿರಿ ನಿಧಿ ಸಂಗ್ರಹವಾಗಲು ಭಾರತೀಯರು ಕೃತಜ್ಞರೆಯಾದ ಪಾವನಮಾತೆ ಕಸ್ತೂರ್‌ಬಾರಲ್ಲಿಟ್ಟಿರುವ ಅನನ್ಯಪ್ರೇಮವೇ ಕಾರಣ. ಇಡೀ ಹಿಂದೂದೇಶದ ಉದ್ದಗಲಕ್ಕೂ ಜನತೆಯು ಬೆಂಬಲ ಕೊಟ್ಟಂತೆಯೇ ಕೊಡಗಿನ ಮಹನೀಯರಾದರೂ ಕೊಟ್ಟಿದ್ದಾರೆ. ದಕ್ಷಿಣ ಕೊಡಗಿನಲ್ಲಿ ನಿರೀಕ್ಷಿಸಿದಷ್ಟು ಧನಸಂಗ್ರಹವಾಗದಿದ್ದರೂ ಕೊಡಗಿನ ನಿಧಿಯು ನಿಶ್ಚಯಿಸಿದ್ದ 10 ಸಾವಿರದ ಗಡಿಯನ್ನು ದಾಟಿ 14,370 ಕ್ಕೆ ತಲಪಿತು. ಕೊಡಗು ಕೊಡುಗೈಯ್ಯನಾಡು ಎಂಬ ಹೆಸರು ಸಾರ್ಥಕವಾಯಿತು.

ಈ ನಿಧಿ ಸಂಗ್ರಹಣಾಕಾರ್ಯದಲ್ಲಿ ಅನೇಕ ದೇಶಾಭಿಮಾನಿಗಳು ಅನೇಕ ರೀತಿಯಿಂದ ನೆರವಾಗಿದ್ದಾರೆ. ಅವರಿಗೆಲ್ಲರಿಗೂ ಕೊಡಗು ಕಸ್ತೂರ್ ಬಾ ಸ್ಮಾರಕ ನಿಧಿಯ ಸಮಿತಿಯವರು ತಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುವರು. ಸಂಗ್ರಹವಾದ ಎಲ್ಲಾ ಹಣವನ್ನು ಬೊಂಬಾಯಿ ಖಜೇರಿಗೆ ಕಳುಹಿಸಲಾಗಿದೆ. ನಿಧಿಯ ವಿನಿಯೋಗದ ಬಗ್ಗೆ ಮಹಾತ್ಮ ಗಾಂಧಿಯವರು ವಿಚಾರ ವಿನಿಮಯಮಾಡುತ್ತಿದ್ದಾರೆ. ಸ್ತ್ರೀಯರ ಪ್ರಗತಿಗಾಗಿ ಮತ್ತು ಚಿಕ್ಕ ಮಕ್ಕಳ ಶಿಕ್ಷಣಕ್ಕಾಗಿ ಇದನ್ನು ವಿನಿಯೋಗಿಸಲಾಗುವದು. 'ಸ್ಥಾಪಿತವಾಗುವ ಶಾಲೆಯು ವರ್ಧಾಶಿಕ್ಷಣ ಕ್ರಮವನ್ನನುಸರಿಸಬೇಕು, ಹೆಚ್ಚಾಗಿ ಹೆಂಗಸರೇ ಇದರ ಕಾರ್ಯಾಚಾಲನೆಯಲ್ಲಿ ಭಾಗವಹಿಸಬೇಕು" ಎಂಬುದಾಗಿ ಗಾಂಧಿಜಿಯವರು ಅಭಿಪ್ರಾಯಪಟ್ಟಿದ್ದಾರೆ. ಕೊಡಗಿನಲ್ಲಿ ಸಂಗ್ರಹವಾದ ನಿಧಿಯ ಶೇಕಡ 75ರಷ್ಟು ಇಲ್ಲಿಯೇ ವಿಚ್ಚುಮಾಡಲ್ಪಡುವದು. ಆದರೆ ಇಲ್ಲಿಯ ಕಾರ್ಯಕಲಾಪಗಳು ಜಯಪ್ರದವಾಗಿ ನಡೆದು ಹೆಚ್ಚಿನ ಧನದ ಅವಶ್ಯಕತೆಯಿದ್ದರೆ ಹೆಚ್ಚಿನ ಹಣ ಒದಗಿಸಿಕೊಡುವ ಅಭಿಪ್ರಾಯವೂ ಗಾಂಧೀಜಿಯವರಲ್ಲಿದೆ. ಆದ್ದರಿಂದ ನಿಧಿ ಸಂಗ್ರಹದಲ್ಲಿ ಸಹಕರಿಸಿದಂತೆಯೇ ಅದನ್ನು ವಿನಿಯೋಗಿಸುವದರಲ್ಲಿಯೂ ಸಾರ್ವಜನಿಕರು ಸಹಾಯ ಸಹಕಾರಗಳನ್ನು, ಕೊಟ್ಟರೆ ಈ ನಿಧಿ ಸಂಗ್ರಹವು ಸಾರ್ಥಕವಾಗುವದು ಮತ್ತು ಮಾತೆ ಕಸ್ತೂರಿಯ ಪಾವನನಾಮವು ಕೊಡಗಿನಲ್ಲಿ ಚಿರಸ್ಥಾಯಿಯಾಗುವದು.

ಡಿ. ಸಿದ್ದಣ್ಣ,
ಪ್ರೆಸಿಡೆಂಟ್,
ಕೊಡಗು ಕ. ಗಾ. ಸ್ಮಾ. ನಿಧಿಯ ಸಮಿತಿಗಾಗಿ.

ಅಖಿಲ ಕೊಡಗು ಜವುಳಿ ವ್ಯಾಪಾರಸ್ಥರ ಸಂಘ.
ಮಡಿಕೇರಿ.

ಮಹನೀಯರೇ,

ಈ ಮೇಲ್ಕಂಡ ಸಂಘದ ಕಮಿಟಿ ವಿಂಟಿಂಗು ತಾ.6-10-44ರಲ್ಲಿ ನಡೆದು ಕೊಡಗಿಗೆ ಬರುವ ಮಿಲ್ಲು ಬಟ್ಟೆಯ ಕೋಟವನ್ನು ತೆಗೆದುಕೊಳ್ಳಲು ಮತ್ತು ವ್ಯಾಪಾರಸ್ಥರಲ್ಲಿ ಹಂಚಲುಕ್ರಮವಾದ ವ್ಯವಸ್ಥೆ ಮಾಡಲು ಒಂದು ವಿಶೇಷ ಮಹಾಸಭೆಯನ್ನು ವೀರಾಜಪೇಟೆಯಲ್ಲಿ ತಾ. 19-10-44ರಲ್ಲು ನಡೆಸುವಂತೆ ತೀರ್ಮಾನಿಸಲಾಯಿತು. ಮತ್ತು ಈ ವರೆಗೆ ಮೆಂಬರಾಗದಿರುವ ವ್ಯಾಪಾರಸ್ಥರು ವಿಶೇಷ ಮಹಾಸಭೆ ಮೊದಲಾಗಲೀ ಅಥವಾ ಆ ದಿವಸವೇ ಆಗಲಿ ಬಂದು ತಾವು ಮೆಂಬರಾಗಿ ವಿಂಟಿಂಗಿನಲ್ಲಿ ಭಾಗವಹಿಸಿ ತಮಗೆ ಬರತಕ್ಕಂಥಾ ಕೋಟವನ್ನು ಹೊಂದಿಕೊಳ್ಳಲು ಭಾಗಿಗಳಾಗಬೇಕಾಗಿ ಈ ಮೂಲಕ ಕೇಳಿಕೊಳ್ಳೋಣಾಗಿದೆ. ಮೆಂಬರಾಗತಕ್ಕವರು ಒಡನೆ ರೂ. 6ನ್ನು ಸಂಘದ ಕಾರ್ಯದರ್ಶಿಯವರಿಗೆ ಆವರ ವಿಳಾಸ ಸಮೇತ ಕಳುಹಿಸಿದಲ್ಲು ಒಡನೆ ಅವರನ್ನು ಮೆಂಬರುಗಳನ್ನಾಗಿ ತೆಗೆದುಕೊಳ್ಳಲಾಗುವುದು.

ಮಡಿಕೇರಿ, 7.10.44. ಕೆ. ಕೆ. ತಿಮ್ಮಯ್ಯ, ಗೌ. ಕಾರ್ಯದರ್ಶಿ.

ರಣ ಭೇರಿ.

ಪತ್ರಿಕೆಗಳಲ್ಲಿ ಪ್ರಬಂಧಿಯೂಗುತ್ತಿರು
ಂಕಿ ನಿ.ತ್ರಂಗೆ ವಿಜಯದ ಪರಂಪರೆಗ
ಮೊರಯುತ್ತಿವೆ. ಇದರಿಂದ ಇ
ನ್ನು ಜರ್ಮನಿಯು ಮುಗಿಯಿತೂ.
ಯೂರೋಪು ಯುದ್ಧ ಕೊನೆಗೊಂಡಿ
ಎಂದು ಹಲವರು ಊಹಿಸುತ್ತಿದ್ದಾ

ಆದರೆ ಕಳೆದ ವಾರ ಬ್ರಿಟಿಷ್
ಧಾನರಾದ ಚರ್ಚಿಲ್ಲರು ಕೊಟ್ಟ ಎ
ರಿಕೆಯನ್ನು ಪ್ರಕಟಿಸಲಾಗಿತ್ತು.
945 ರಲ್ಲೂ ಯುದ್ಧವು ನಡೆಯುವ
ಬ ಅವರ ಮಾತು ನಿಜವಾಗುವದೆಂ
ದಕ್ಕೆ ಕಳೆದ ಎರಡು ವಾರಗಳಿಂದ
ರ್ಮನರು ತೋರಿಸುತ್ತಿರುವ ಶೌ
ರ್ಯವೇ ನಿದರ್ಶನವಾಗಿದೆ. ಫ್ರಾನ್ಸಿ
ಕಲೆ ಬಂದರವನ್ನು ಕರಗತಮಾಡಿ
ಂಡ ನಂತರ ಮಿತ್ರರು ಹೇಳಿಕೊಳ್ಳ
ಯೋಗ್ಯವಾಗಿ ಎಲ್ಲಿಯೂ ಮುಂ
ದಿಲ್ಲವೆನ್ನಬಹುದು. ಬದಲು ಒಂ
ಡು ಕಡೆ ಜರ್ಮನರಿಂದ ಹಿಮ್ಮೆ
ಸಲ್ಪಟ್ಟಿದ್ದಾರೆ. ಜರ್ಮನಿಯ ಕೇಂ
ಸ್ಥಾನವಾದ ಬರ್ಲಿನಿಗೆ ನುಗ್ಗಲು
ಲೆಂಡು ಬಾಗಿಲಿನಂತಿದೆ. ಅಲ್ಲಗಾ
ಲ್ಲೇ ಮಿತ್ರರು ನುಗ್ಗಿದ್ದಾಗಿದೆ. ಆ
ರೆ ಜರ್ಮನರು ತಮ್ಮ ಶಕ್ತಿ ಪ್ರದ
ರ್ಶನವನ್ನು ಅಲ್ಲಿ ಜೆನ್ಮಾಗಿ ಮಾಡಿದ
ಎ. ಅರ್ನವಿಂದಲ್ಲಿ ಅಂಗ್ಲೋ ಅಮೇ
ಕನರಿಪ್ಪತ್ತೈದೂನ ಮೂಲಕ ಸೇನೆಗಳ
ನ್ನು ಇಳಿಸಿದ್ದರು. ಇಳಿದ ಯೋಧ
ವೀರರಂತೆಯೇ ಹೋರಾಡಿದರು.
ದರೆ ಹವಾಗುಣದ ಮತ್ತು ಸಾಕಷ್ಟು
ಬರಾಯಿ ಇಲ್ಲದ ಕಾರಣ ಎಂಟು
ವಿರ ಸೈನಿಕರಲ್ಲಿ 2000 ಮಾತ್ರ ಉ
ದರು. ಉಳಿದ ಈ ಸೈನಿಕರೂ ನಿರ್ವಾ
ವಿಲ್ಲದೆ ಹಿಂಜರಿಯಬೇಕಾಯಿತು.
ರ್ಮನರ 'ಸೀಗ್‌ಫ್ರೈಡ್' ವ್ಯೂಹವು
ಈ ಭಾಗದಲ್ಲಿಯೇ ನಿರ್ಬಲವಾಗಿರುವ
ಾಗಿದೆ. ಆದ್ದರಿಂದಲೇ ಮಿತ್ರರು
ಈ ಮಾರ್ಗವಾಗಿ ಲಗ್ಗೆ ಹತ್ತುತ್ತಿದ್ದಾರೆ.
ದರೆ ಜರ್ಮನರು ಇಲ್ಲಿ ತಮ್ಮ
ದ್ವಿತೀಯ ಸೇನೆಗಳನ್ನು ನಿಲ್ಲಿಸಿದ್ದಾರೆ.
ಮಿತ್ರರು ಫ್ರಾನ್ಸಿಗೆ ಕಾಲಿಟ್ಟಂದಿನಿಂದ
ಹು ನಿರಾಯಾಸವಾಗಿ ಮುಂದರಿಯು
ತ್ತಾ ಬಂದಿದ್ದ ಕಾರಣ ಜರ್ಮನರ ಶ
ಕ್ತಿ ಉಡುಗಿದೆಯೆಂದು ಹಲವರು ತ
ರ್ಕಿಸಿದ್ದರು. ಆದರೆ ಜರ್ಮನರು ಈ
ದಿನ ಪ್ರತಿಘಟನಾ ವೈಖರಿಯು ಹಲವ
ರನ್ನು ದಂಗುಬಡಿಸಿದೆ. ಬೆಲ್‌ಫೋ
ರ್ಟ್‌ನ ಕಡೆಯಲ್ಲಿ ಅಮೇರಿಕನ್ ದಳಗ
ಳು ಅಬ್ಬರಿಸಿ ಹೋರಾಡುತ್ತಿದ್ದವು.
ಕಳೆದ ವಾರದಿಂದ ಅವರ ಅಬ್ಬರವೂ
ಡಗಿದೆ. ಹೇಗೂ ಈ ವರೆಗೆ ಮುಂ
ದರಿಯುತ್ತಿದ್ದ ಮಿತ್ರರನ್ನು ಜರ್ಮ
ನ್ ಗಡಿಯಲ್ಲಿ ಜರ್ಮನರು ತಡೆದು ನಿ
ಲ್ಲಿಸಿದ್ದಾರೆ.

ಹೀಗೆ ಮಿತ್ರರನ್ನು ತಡೆಗಟ್ಟಿರುವ ಜರ್ಮನರು ಎಷ್ಟು ದಿನ ಹೀಗೆ ತಡೆದಾರು? ಮಿತ್ರರನ್ನು ಹಿಮ್ಮೆಟ್ಟಿಸುವದು ಸಾಧ್ಯವೇ? ಜರ್ಮನರು ಜಯ ಪಡೆಯುವ ಸಾಧ್ಯತೆಯಿದೆಯೇ? ಎಂಬುದಾಗಿ ಕೆಲವರು ಕೇಳುತ್ತಾರೆ. ಜರ್ಮನರು ನಿರಾಶೆಗೊಂಡು ಕುಳಿತಿಲ್ಲ. ಹಿಟ್ಲರನು ಕಡೇ ತನಕ ಹೋರಾಡಲು ಹೇಗೆ ಸಿದ್ಧನಿರುವನೋ ಹಾಗೆಯೇ ಆತನ ಸೇನೆಗಳೂ ಸಿದ್ಧವಿವೆ. ಆದ್ದರಿಂದ ಮಿತ್ರರನ್ನು ಗಡಿಯಲ್ಲಿಯೇ ಬಹು ದಿನಗಳ ವರೆಗೆ ತಡೆದರೂ ಆಶ್ಚರ್ಯಪಡಬೇಕಿಲ್ಲ. ಜರ್ಮನಿಗೆ ಜಯದೊರೆಯುವದೆಂಬ ಮಾರ್ಗವು ಮುಚ್ಚಾಗುತ್ತಾ ಬಂದಿದೆ. ಅಸಾಧ್ಯವಾದ ಪವಾಡದಿಂದ ಜರ್ಮನಿಗೆ ಜಯದೊರೆಯಬೇಕೇ ವಿನಾಹ ಬೇರೆ ಮಾರ್ಗದಿಂದ ದೊರೆಯದು. ಜರ್ಮನರು ತಮ್ಮ ಅಂತ್ಯ ದಿನಗಳನ್ನು ಶೂರತನದಿಂದ ಕಾದಾಡಿ ಮುಂದೂಡಬಹುದು. ಆದರೆ ಅವರಿಗೆ ಅಸಜಯವು ಖಂಡಿತವೆಂದು ಹಲಪರ ಅಭಿಪ್ರಾಯವಿದೆ. ಮಿತ್ರರು 'ಸೀಗ್‌ಫ್ರೈಡ್' ಗೋಡೆಯನ್ನು ಮುರಿದು ಜರ್ಮನಿಯೊಳನುಗ್ಗಿದರೆ ಜರ್ಮನರೇನುಮಾಡಿಯಾರೆಂದು ಕೇಳುವವರಿದ್ದಾರೆ. ಹಿಟ್ಲರನು ಅಸಾಧ್ಯಮನುಷ್ಯನಿದ್ದಾನೆ. ಸುತ್ತೂ ಮಿತ್ರ್ರು ಸೇನೆಗಳು ಗಂಡುಹಾರಿಸುತ್ತಿದ್ದರೂ ಧೃತಿಗೆಡದೆ ಕಾದಿತ್ತಿದ್ದಾನೆ. ಆತನ ಶೈಯಲ್ಲಿ ಮುಂದಕ್ಕೆ ಯಾವ ಯೂಪ ಯೋಜನೆಗಳಿರುವವೋ ಬಲ್ಲವರಾರು? ಹೇಗೂ ಜರ್ಮನರು ಸುಲಭದಲ್ಲಿ ಇಲ್ಲವೆಂದಿಷ್ಟೆ ಈಗ ಹೇಳಬಹುದು. ಪೂರ್ವಭಾಗದಿಂದ ಮುನ್ನುಗ್ಗುತ್ತಿರುವ ರಷ್ಯನರ ಪ್ರಗತಿ ಈ ವಾರ ಸ್ವಲ್ಪ ಹೆಚ್ಚಾಗಿದೆ. ಮುಂದಿನ ಘೋರ ಸಂಗ್ರಾಮಕ್ಕೆ ಅವರು ಸಿದ್ಧತೆ ಮಾಡಿಕೊಂಡಂತೆ ಕಂಡುಬರುತ್ತದೆ. ಇತ್ತ ಇಟಲಿಯಲ್ಲಿ ಇಟಲಿಯನ್ನು ಶೀಘ್ರ ಆಕ್ರಮಿಸಿಕೊಳ್ಳಬೇಕೆಂದು ಹೊರಟ ಮಿತ್ರರ 8 ನೇ ಮತ್ತು 5 ನೇ ದಳಗಳು ಕಳೆದ ಒಂದು ವರ್ಷದಿಂದ ಯತ್ನಿಸಿದರೂ ಇಟಲಿಯು ಪೂರ್ಣ ವಶವಾಗಿಲ್ಲ. ಉಳಿದ ಭಾಗಗಳನ್ನು ಹಿಡಿಯಲು ಇನ್ನೆಷ್ಟು ದಿನಗಳು ಹಿಡಿಯುವವೋ ಬಲ್ಲವರಾರು?

ಚೀನಿಯರು ಜಪಾನರನ್ನು ಹಣ್ಣುಮಾಡಿದ್ದಾರೆ. ಬರ್ಮಾದಲ್ಲಿ ಅವರ ಸೇನೆಗಳನ್ನು ಪುಡಿಹಾರಿಸಲಾಯಿತು. ಅಮೇರಿಕನರು ಶಾಂತಸಾಗರ ದ್ವೀಪಗಳಲ್ಲಿ ಬಹುಜನ ಜಪಾನರನ್ನು ನಾಶಮಾಡಿದರು ಎಂಬೀತರಹದ ವಾರ್ತೆಗಳು ದಿನವಹಿ ಬರುತ್ತಿವೆ. ಇದರಿಂದ ಜಪಾನರ ಶಕ್ತಿ ಕುಗ್ಗಿದೆಯೇ? ಹಾಗೆ ಶಕ್ತಿ ಕುಗ್ಗಿದ ಕಾರಣದಿಂದಲೇ ಹಿಂದೂಸ್ಥಾನಕ್ಕೆ ಕಾಲಿಟ್ಟವರು ವಾಪಾಸುಹೋದರೇ? ಎಂಬ ಪ್ರಶ್ನೆಗಳನ್ನು ಹಲವರು ಕೇಳತೊಡಗಿದ್ದಾರೆ. ಚರ್ಚಿಲ್ಲರು ತಮ್ಮ ಭಾಷಣದಲ್ಲಿ ಮುಳೆಗಾಲದ ನಂತರ ಜಪಾನರು ಹಿಂದೂದೇಶದ ಮೇಲೆ ಧಾಳಿ ಮಾಡಬಹುದೆಂದು ಸೂಚಿಸಿದ್ದನ್ನು ನೋಡಿದರೆ ಜಪಾನರ ಬಲ ಕುಗ್ಗಿಲ್ಲವೆಂದು ಹೇಳಬಹುದು. ಜಪಾನರಿಗೆ ನಷ್ಟವಾಗಿಲ್ಲವೆಂದು ಹೇಳಲಾಗುವದಿಲ್ಲ. ಆದರೂ ಜಗತ್ತಿನ ಯುದ್ಧಾಸಕ್ತ ಪ್ರಮುಖ ರಾಷ್ಟ್ರಗಳಲ್ಲಿ ಹೆಚ್ಚು ನಷ್ಟಪಡದೆ ಇರುವ ರಾಷ್ಟ್ರವು ಜಪಾನಾಗಿದೆ. ಅದರ ನೆಲ, ಜಲ, ಆಕಾಶ ಸೇನೆಗಳು ಬಲಯುತವಾಗಿವೆ. ಯೂರೋಪಿನ ಯುದ್ಧ ಮುಗಿದ ಒಂದು ವರ್ಷದಲ್ಲಿ ಜಪಾನನ್ನು ಸೋಲಿಸುವೆವೆನ್ನುವದು ಕಷ್ಟದ ಮಾತು ಎಂದು ಮಿಲಿಟರಿ ತಜ್ಞರು ಹೇಳುತ್ತಿದ್ದಾರೆ. ಜಪಾನರ ಒಟ್ಟು 300000 ಜನರು ಈ ವರೆಗೆ ಯುದ್ಧದಲ್ಲಿ ಮಡಿದಿರುವರೆಂದೂ ಇನ್ನೂ ಅವರ 90 ಸೈನ್ಯಕ್ಕೆ ಡಿವಿಜನುಗಳು ಇರುವವೆಂದೂ ಊಹೆ ಇದೆ. ಜಪಾನು ಶಾಂತಸಾಗರದ ಬಹು ದ್ವೀಪಗಳ ಒಡೆತನವನ್ನು ಸಂಪಾದಿಸಿದೆ. ಹಲವು ದ್ವೀಪಗಳಲ್ಲಿ ತನ್ನ ವಿಮಾನ, ನೌಕಾ ಕೇಂದ್ರಗಳನ್ನು ಸ್ಥಾಪಿಸಿದೆ. ಅಪರ ಈ ನೆಲೆಗಳಿರುವ ಹಲವು ದ್ವೀಪಗಳ ಸನಿಹಪಹೋಗುವದೇ ದುಸ್ತರವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಜಪಾನರು ತಾವು ಆಕ್ರಮಿಸಿದ ಪ್ರಾಂತಗಳ ಆಳ್ವಿಕೆಯನ್ನು ಅಲ್ಲಿಯ ವರಿಗೇ ಕೊಟ್ಟು ಆ ಭಾಗಗಳಲ್ಲಿ ಯುದ್ಧಕ್ಕೆ ಬೇಕಾದ ಮಹಾ ಕೈಗಾರಿಕೆಗಳನ್ನೂ, ವ್ಯವಸಾಯವನ್ನೂ ಶಿಸ್ತಿನಿಂದ ಮಾಡಿಸುತ್ತಿದ್ದಾರೆ. ಆದ್ದರಿಂದ ಅವರ ಶಕ್ತಿಯು ಸುಲಭದಲ್ಲಿ ಹ್ರಾಸವಾಗಲಾರದು. ಜಪಾನಿನ ಮೇಲೆ ಕೈಮಾಡಲು ಮಿತ್ರರು ತಕ್ಕ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಹಡಗುಗಳ ಚಲನವಲನ ಪ್ರಾರಂಭವಾಗಿದೆ. ಈ ಮಧ್ಯೆ ಚರ್ಚಿಲ್ ಈಡೆನರು ರಷ್ಯಾಕ್ಕೆ ಬಂದು ಸ್ಟಾಲಿನರ ಭೇಟಿ ಮಾಡಿದ್ದಾರೆ. ಯಾವ ವಿಚಾರದ ಚರ್ಚೆಯಾಗಿದೆಯೋ ಇನ್ನೂ ಬಹಿರಂಗವಾಗಿಲ್ಲ.

ನಿಮ್ಮ ದಿನನಿತ್ಯದ ಉಪಯೋಗಕ್ಕೆ ಉತ್ತಮೋತ್ತಮ ವಾದ

ಪರಿಮಳವುಳ್ಳ
—ಶಾರದಾ—
ಕಾಫಿ ಪುಡಿ

ಇದನ್ನೇ ಉಪಯೋಗಿಸಿರಿ.

ಕಾಫಿ ಪುಡಿಗಳಲ್ಲಿ ತಿಲಕಪ್ರಾಯವಾದ್ದು.

SHRI SHARADA COFFEE HOME,
McDOWELLS BUILDINGS, *MERCARA*.

ತಿದ್ದುಪಡಿ.

ಕಳೆದ ವಾರ ಪ್ರಕಟಿಸಿದ ಕಸ್ತೂರ್ ಬಾ ನಿಧಿಯ ಪಟ್ಟಿಯಲ್ಲಿ ಶ್ರೀಮತಿ ತೋಟಂಬೈಲು ಬೊಳ್ಳಮ್ಮ ಮೂದಪ್ಪ ರೂ. 25 ಎಂಬುದು ಶ್ರೀ ತೋಟಂಬೈಲು ಮೂದಪ್ಪ ಎಂದು ತಪ್ಪಾಗಿ ಪ್ರಕಟವಾಗಿದ್ದೆ. ಇದನ್ನು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. ಸಂ.]

ಕೌನ್ಸಿಲ್ ವಿಂಟಿಂಗು.

(1ನೇ ಪುಟದಿಂದ ಸಾಗಿದ್ದು)

(9) "ಸಾಗು ಭೂಮಿಯ ಮೂಲೀಕರಿಗೆ ಕೊಡುವ ಕೋಪಿ ಲೈಸೆನ್ಸುಗಳಲ್ಲಿ ಮುಂದಕ್ಕೆ ಆ ಲೈಸೆನ್ಸ್‌ದಾರನ ಕುಟುಂಬದ ಪ್ರಾಯಪ್ರಬುದ್ಧರೆಲ್ಲರೂ ಕೋಪಿಹಿಡಿಯುವ ರಿಯಾಯಿತಿಯನ್ನು ಕೊಡಬೇಕು" ಎಂಬ ಠರಾವನ್ನು ಶ್ರೀ. ಎಚ್. ಅಣ್ಣಯ್ಯನವರು ಸೂಚಿಸಿದರು. ಶ್ರೀ. ಎ. ಎಸ್. ಪೊನ್ನಪ್ಪನವರು ಅನುಮೋದಿಸಿದರು. ಈ ರಿಯಾಯಿತಿಯನ್ನು ಕೊಡಬೇಕಾದರೆ ಆಪರ್ಸ್ ಆಕ್ಟನ್ನು ತಿದ್ದುಪಡಿಮಾಡಬೇಕಾಗುವದೆಂದೂ, ಇಂಥಾ ವಿನಾಯಿತಿ ಕೇವಲ ಕೊಡಗಿಗೆ ಪೂರ್ತ ಕೊಡಲ್ಪಟ್ಟಿದೆಯೆಂದೂ, ಆದ್ದರಿಂದ ಸರಕಾರವು ಈ ಠರಾವಿಗೆ ಬೆಂಬಲಕೊಡಲಾರದೆಂದೂ ಆದರೂ ಬೇಕಾದ ಹಾಗೆ ಲೈಸೆನ್ಸು ಬದಲಾಯಿಸಿಕೊಡುವಲ್ಲಿ ಸರಕಾರವು ಆಡ್ಡಿಮಾಡದೆಂದೂ ಫೈನಾನ್ಸು ಮೆಂಬರರು ಹೇಳಿದರು. ಸೂಚಕರು ಠರಾವನ್ನು ಈ ಭರವಸೆ ಮೇರೆ ವಾಪಾಸು ತೆಗೆದುಕೊಂಡರು.

(10) "ಮಡಿಕೇರಿ ಮುನ್ಸಿಪಾಲಿಟಿಯೊಳಗಿರುವ ಖಾಲಿಯಾದ ಫರಕಾವಿ ಜಾಗದ ದ್ವಂದ್ವ ಹಿಡುವಳಿತನವನ್ನು ತಪ್ಪಿಸಲಿಕ್ಕಾಗಿ ಮುನ್ಸಿಪಾಲಿಟಿಗೆ ಪಟ್ಟಾಕೊಡಬೇಕು" ಎಂಬ ಠರಾವನ್ನು ಶ್ರೀ. ನಿಡ್ಯಪಂಡ ಸೋಮಣ್ಣನವರು ಸೂಚಿಸಿದರು. ಶ್ರೀ ಬಿ. ಎ. ಬೆಳ್ಯಪ್ಪನವರು ಅನುಮೋದಿಸಿದರು. ಮುನ್ಸಿಪಾಲಿಟಿಗೆ ತನಗೆ ಈಗಿರುವ ಜವಾಬ್ದಾರಿಯನ್ನೇ ನಿರ್ವಹಿಸಿಕೊಂಡು ಹೋಗುವಷ್ಟು ಶಕ್ತಿಯಿಲ್ಲವೆಂದೂ ಹಾಗಿರುವಾಗ ಈ ಹೆಚ್ಚಿನ ಜವಾಬ್ದಾರಿ ಅವರ ಶಕ್ತಿಗೆ ಮಿಗಿಲಿದ್ದೆಂದೂ ಫೈನಾನ್ಸು ಮೆಂಬರರು ವಿರೋಧಿಸಿದರು. ಠರಾವನ್ನು ಓಟಿಗೆ ಹಾಕಲಾಗಿ ಶ್ರೀ ಕೆಸ್. ಸೋಮಣ್ಣ ಮತ್ತು ಬಿ. ಎ. ಬೆಳ್ಯಪ್ಪನವರು ಪರವಾಗಿಯೂ ಸರಕಾರಿ ಯೂರೋಪಿಯನ್ ಮತ್ತು ಎ. ರಹಮಾನ್ ಖಾನರು ವಿರೋಧವಾಗಿಯೂ, ಉಳಿದವರು ತಟಸ್ಥವಾಗಿಯೂ ಇದ್ದ ಕಾರಣ ಠರಾವು ಪಾಸಾಗಲಿಲ್ಲ.

ಕಾರ್ಯಕ್ರಮ ಪಟ್ಟಿಯಲ್ಲಿದ್ದ ವಿಷಯಗಳೆಲ್ಲವೂ ಮುಗಿದ ಕಾರಣ ಸಾಯಂಕಾಲ 5 ಗಂಟೆಗೆ ವಿಂಟಿಂಗು ಮುಕ್ತಾಯಗೊಂಡಿತು.

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಭೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂ ದು ನಾವೆಲ್ಲರೂ ಒಪ್ಪುವೆವು.

ವಿವರಗಳಿಗೆ ಬರೆಯಿರಿ:—

ಕೊಡ್ಡಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

4) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್‌ಫೋ—ಮೂಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ; ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂ ಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟ ಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೂಲ್ಟ್, ಹೆಪೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ ಫೇಟ್ ಪೆಪ್ಸಿನ್, ಸಾಲ್, ಮೂಲ್ಟ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶ ವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಷಾಪುಗಳಲ್ಲಿದೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

6) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

43) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸೆಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ	೧೬,೪೪,೮೮,೦೦೦ ,,
	ಆಸ್ತಿ	೬,೩೦,೪೬,೦೦೦ ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜಮಾ ಬಾದ ಶೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಶೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಆದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ನೂಡುತ್ತಾರೆ.

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ, ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿವಾದ ಟ್ರಾಪಿಕಲಿನಲ್ಲಿ ವಿಮೆ ಮಾಡಿರಿ.

ಮುಖ್ಯ ಖಜೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,

38) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕಸ್ತೂರ್ ಬಾ ಸ್ಮಾರಕ ನಿಧಿ.

ಕೊಡಗಿನಲ್ಲಿ ರೂ. 14,370 ಸಂಗ್ರಹವಾಯಿತು.

1 ರೂ. ಕೊಟ್ಟವರು.

ಶ್ರೀಗಳಾದ ಎಂ. ಬಿ. ಅಚ್ಚಣ್ಣ, ಎಂ. ಯು. ಅಚ್ಚಣ್ಣ, ಕಮಲಾಬಾಯಿ, ರಂಧಾಬಾಯಿ, ಎಂ. ಅಕ್ಕಮ್ಮಬಾಯಿ, ಬಿ. ಎಂ. ಚಿಣ್ಣಪ್ಪ, ಎಚ್. ಕೆ. ಮೂರ್ತಿ, ಬಿ. ಐ. ಕುಂಞಪ್ಪ, ಕೆ. ಸೋಮಯ್ಯ, ಪಿ. ಎ. ಸುಬ್ಬಯ್ಯ, ಸಿ. ಕೆ. ಗೋವಿಂದನ್, ಸಿ. ಅಚ್ಚಪ್ಪ, ಎಚ್. ಎನ್. ಮಲ್ಲಪ್ಪ, ಕೆ. ಚಿಣ್ಣಪ್ಪ, ಯು. ಬಿದ್ದಪ್ಪ, ಜಿ. ಅಬ್ದುಲ್ ಖಾದರ್, ಬಿ. ಪಿ. ಬೋಪಯ್ಯ, ಪಿ. ಪಿ. ಸುಬ್ಬಯ್ಯ, ಕೆ. ಎಸ್. ಮೂದಪ್ಪ, ಕೆ. ಉಮ್ಮರ್, ಮೂಲೆಮನೆ ರಂಗಯ್ಯಶೆಟ್ಟಿ, ಎಲ್. ಎಸ್. ಮುತ್ತಣ್ಣ, ಎಚ್. ಪಿ. ಮಲ್ಲಪ್ಪ, ಎಚ್. ಸಿ. ಅಪ್ಪಯ್ಯ, ಎಚ್. ಸಿ. ಶಾಂತಮಲ್ಲಪ್ಪ, ಎಚ್. ಬಿ. ಕುಶಾಲಪ್ಪ, ಎಸ್. ಎ. ಪೂವಯ್ಯ, ಬಿ. ಎನ್. ನಾರಾಯಣಶೆಟ್ಟಿ, ಅಂಚೆಟ್ಟಿಂಗಿ ಸಿದ್ಧಬಸಪ್ಪ, ಮೂವಿನಳ್ಳಿ ಸಿದ್ಧಬಸಪ್ಪ, ಕುಪ್ಪಂಡ ಚಂಗಪ್ಪ, ನೆಲ್ಲಮಕ್ಕಳ-ಕುಶಾಲಪ್ಪ, ಸೋಮಯಂಡ ಸುಬ್ಬಯ್ಯ, ಮಾಚಿಮಂಡ ಚಂಗಪ್ಪ, ಪೂದ್ರಿವಾಡ ಬೆಳ್ಯಪ್ಪ, ಉದ್ದಪಂಡ ಚಂಗಪ್ಪ, ಕುಂಞಾಯಂಡ ತಿಮ್ಮಯ್ಯ, ಉದ್ದಪಂಡ ಅಚ್ಚಪ್ಪ, ವಿದ್ವಾನ್, ಕೆ. ವಿ. ರಮಣ, ಕೆ. ಪಿ. ಸುಬ್ಬರಾವ್, ಎ. ಪಿ. ಗೋಪಾಲಕೃಷ್ಣ, ಎನ್. ಸಿ. ಬಿದ್ದಪ್ಪ, ಎಸ್. ಎಸ್. ಕೃಷ್ಣರಾವ್, ಮಿಸೆಸ್ ಸರೋಜ ಶಂಕರನಾರಾಯಣ, ಎಂ. ಪಿ. ಗಣಪತಿ, ಮಿಸೆಸ್. ರಾಜಗೋಪಾಲ್, ಮಿಸೆಸ್. ಆನಂದತೀರ್ಥ, ಎನ್. ನಾರ್ಣಯ್ಯ, ಪಿ. ಕೆ. ಐಯ್ಯಣ್ಣ, ಪಿ. ಟಿ. ಕಾರ್ಯಪ್ಪ, ಟಿ. ಎ. ಸುಬ್ಬಯ್ಯ, ಎಸ್. ಎಚ್. ಅಬ್ದುಲ್ ರಝಾಕ್, ಪಿ. ಪಿ. ಗಣಪತಿ, ಎಂ. ಎ. ಬಿದ್ದಪ್ಪ, ಕೆ. ಪಿ. ಕುಶಾಲಪ್ಪ, ನಾರಾಯಣ, ಜೋಸೆಫ್, ಚಕ್ಕೂ, ವಕ್ಕಲಿಗರ ತಮ್ಮಯ್ಯ, ಚೋಕಂಡ ಮೂಚಯ್ಯ, ಚೋಕಂಡ ಚಂಗಪ್ಪ, ಚೋವಂಡ ಬೆಳ್ಯಪ್ಪ, ಕುಪ್ಪಚ್ಚಿರ ದೇವಯ್ಯ, ಎಚ್. ಬಿ. ತಮ್ಮಯ್ಯ, ಸಿ. ಬಿ. ಮೊಣ್ಣಪ್ಪ, ಸೋಪಯಂಡ ಅಚ್ಚಯ್ಯ, ವಕ್ಕಲಿಗರ ಹನುಮಯ್ಯ, ವಕ್ಕಲಿಗರ ನಂಜಪ್ಪ, ಮಿಸೆಸ್. ಪುಲಿಯಂಡ ಸೋಮಯ್ಯ, ಮಿಸೆಸ್. ಪುಲಿಯಂಡ ಪೂವಯ್ಯ, ಮಿಸೆಸ್. ವಿ. ರಾಮಯ್ಯ, ಮೇಚಂಡ ಕುಟ್ಟಪ್ಪ, ಕುಟ್ಟಂಡ ಎಂ. ಸೋಮಯ್ಯ, ಕೆ. ಆರ್. ಕೃಷ್ಣಯ್ಯ, ಬಂಟ್ರ ಅಪ್ಪು, ಬಿ. ರಾಮಣ್ಣ, ಶ್ರೀಮತಿ ಕುಟ್ಟಂಡ ಪಿ. ನಂಜವ್ವ, ಶ್ರೀಮತಿ ಕುಟ್ಟಂಡ ಎಸ್. ಮುತ್ತವ್ವ, ಶ್ರೀಮತಿ ಕುಟ್ಟಂಡ ಸಿ. ಬೆಳ್ಯವ್ವ, ಎ. ಬಿ. ಐಯ್ಯಪ್ಪ, ಕರವಂಡ ಗಣಪತಿ, ಎಂ. ಎನ್. ಅಚ್ಯುತನ್, ಬಿ. ಸುಬ್ಬಯ್ಯ, ಡಿ. ಬಿ. ಬೊಳ್ಳಪ್ಪ ಪೊನ್ನೆಟ್ಟಿ ಮುತ್ತಪ್ಪ, ಪುಗ್ಗೇರ ಮುತ್ತಣ್ಣ, ಐರಿ ಮುತ್ತ, ಎಂ. ಪುಟ್ಟಸ್ವಾಮಿ, ಡಿ. ಎಂ. ವೀರಭದ್ರ, ಎಂ. ಎಚ್. ಬಾದ್‌ಶಾ ಆಡ್, ಕೋ. ಪಿ. ಎನ್. ಶೇವಯ್ಯಶೆಟ್ಟಿ ಡಾ. ಪಾಲಣಿ, ಹಾಜಿ. ಟಿ. ಎ. ಬ ಮೊನ್, ಸುಬ್ಬರಾವ್, ಜಿ. ಎಸ್. ಅ ಹಮದ್, ಶಕುನಮಂ ಶೆಟ್ಟಿ, ಎಚ್. ಎಂ. ಬಸಪ್ಪ, ಎಂ. ಎಸ್. ಬ ಗಯ್ಯ, ಎ. ಕೆ. ಶ್ರೀಕಂಠಯ್ಯ, ನರ ಸಿಂಗರಾವ್, ಎನ್. ಎನ್. ಕೃಷ್ಣ ಯ್ಯ, ಐ. ಪಿ. ಕೇಳನ್, ಸಿ. ಕರವನ, ಪಿ. ಆನಂದನ್, ವಿ. ಆದಮ್, ಇ ಬ್ರಾಹಿಂಕಾಕ, ಪಿ. ಅಬ್ದುಲ್, ಬಲ್ಲ ಚಂಡ ಉಮ್ಮವ್ವ, ಜಿ. ವೆಂಟಕಲಕ್ಷ್ಮ ಮ್ಮ, ಬಿ. ಆನಂದಬಾಳಿಗ, ಚಾರಿಮಂ ಡ ಮುದ್ದಪ್ಪ, ಮಹಮ್ಮದ್‌ಗೌಸ್, ಸಿ. ನಂಜಪ್ಪಯ್ಯ, ಶುಳ್ಳಿಕೋಡಿ ಜಪ್ಪ ಚ್ಚ, ದೊಡ್ಡೇರ ತಮ್ಮಯ್ಯ, ಕುದುಪಜೆ ದೇವಯ್ಯ, ಮಂಗೇರಿ ಮಂದಣ್ಣ, ಕೇ ಕಡ ಪಳಂಗಪ್ಪ, ಟಿ. ಆರ್. ರಂಘವಾ ಚಾರ್, ಕೆ. ಬಿ. ಕಾರ್ಯಪ್ಪ, ಪಿ. ಎಸ್. ಗಣಪತಿ, ಉದಿಯನ ನಂಜ ಪ್ಪ, ಪೊನ್ನೆಟ್ಟಿ ಎಂ. ಪೂವಮ್ಮ, ಪಾ ಣತಲೆ ಕೃಷ್ಣಪ್ಪ, ಡಿ. ಟಿ. ಮಲ್ಲಪ್ಪ, ಮನೆಯಪಂಡ ಪಿ. ಗಣಪತಿ, ಪಟ್ಟ ಮೂಡ ಪೂವಯ್ಯ, ಪಟ್ಟಮೂಡ ಮುದ್ದಪ್ಪ, ಪಟ್ಟಮೂಡ ಬೊ ಳ್ಳವ್ವ, ಪಟ್ಟಮೂಡ ಕಾವೇ ಣಿ, ಮೊಟ್ಟೆಯಂಡ ಉತ್ತಯ್ಯ, ನಾಳಿ ಯಮ್ಮನ ಕುಟ್ಟಮ್ಮ, ಮಿಸೆಸ್, ಕೆ. ಸಿ. ನಂಜುಂಡ, ಕಳ್ಳೇಂಗಂಡ ಸೋಮಯ್ಯ, ಎ ಪಿ. ತಿಮ್ಮಪ್ಪಯ್ಯ, ನಾಯಕಂಡ ಮುದ್ದಯ್ಯ, ಕಲಿಯಂಡ ನಂಜುಂಡ, ತಿಪ್ಪೈರಂಡ ಪೂವಯ್ಯ, ಕೊಂಡಿರ ನಂಜುಂಡ, ವಾಂಚಿರ ಮೋಣ್ಣಪ್ಪ, ಎನ್. ಬಿ. ರಾಘವೇಂದ್ರ, ಮಣವಟ್ಟಿರ ಮುತ್ತವ್ವ, ಮಚ್ಚಂಡ ಮಂದಣ್ಣ, ಪಿ. ಎಂ. ಉತ್ತಪ್ಪ, ಎಂ. ಎಸ್. ಚಂಗಪ್ಪ, ಕೆ. ಸಿ. ತಂಗಮ್ಮ, ಮಿಸೆಸ್. ಸಿ. ಸೀತಾ ಕಾಳಿಪ್ಪ, ಮಿಸೆಸ್. ಬಿ. ಎಂ. ದೇವಯ್ಯ, ಎಂ. ಆರ್. ಪರಮೇಶ್ವರಯ್ಯ, ಜಿ. ಆರ್. ಕೃಷ್ಣಯ್ಯ, ಮಿಸೆಸ್. ಎಂ. ಬಿ. ಅಪ್ಪಯ್ಯ, ಮಿಸೆಸ್. ವಿಮಲ, ಬಲ್ಲಡಿಂಡ ಕಾರ್ಯಪ್ಪ, ಬಿ. ಸಿ. ಮಂದಣ್ಣ, ಕೊರವಂಡ ದೇವಯ್ಯ, ಮಿಸೆಸ್. ಕೊರವಂಡ ದೇವಯ್ಯ, ಕೊಡಂದೇರ ಬೋಪಯ್ಯ, ಮಿಸೆಸ್. ಕೊಡಂದೆರ ಬೋಪಯ್ಯ, ಕೆ. ಎಂ. ಕಾವೇರ್ಯಪ್ಪ, ಪಿ. ಬಿ. ಮೂಚಯ್ಯ, ಕೆ. ರಾಮಸ್ವಾಮಯ್ಯ, ಪಳ್ಳಂಗಡ ಮುದ್ದವ್ವ, ಪಕ್ರಂದೀನ್‌ಬ್ಯಾರಿ, ಬಡ್ಡಿರ ಪೂಣಚ್ಚ, ಕುಟ್ಟಿಯರ ವೇದಪ್ಪ, ಪಟ್ಟಮೂಡ ಬೋಪಯ್ಯ, ಕೆ. ಅಪ್ಪುನಾಯಕರ್, ಪಟ್ಟಮೂಡ ಅಪ್ಪಯ್ಯ, ಟಿ. ಬಿ. ಸಂಜೀವಮೂರ್ತಿ, ಕೆ. ಕೆ. ಮುತ್ತಣ್ಣ, ಎಂ. ಡಿ. ಕುಶಾಲಪ್ಪ, ಟಿ. ವಿ. ಸುಬ್ಬಯ್ಯ, ಮೂಕಳೆರ ಉಮ್ಮವ್ವ, ಕೆ. ಕಾರ್ಯಪ್ಪ, ಕೆ. ಗಣಪತಿ, ಎಂ. ಎಸ್. ಚೆರ್ಮಣ, ಮಿಸೆಸ್. ಎನ್. ಸಿ. ಪೊನ್ನಪ್ಪ, ವಿ. ಕೆ. ರಾಮನ್, ಬಿ. ಎಂ. ಐಯ್ಯಣ್ಣ, ಪಿ. ರಾಮಚೆಟ್ಟಿಯಾರ್, ಟಿ. ಪಿ. ಕುಪ್ಪುಸ್ವಾಮಿ, ಎ. ಜಿ. ಬೋಪಯ್ಯ, ಎಂ. ಕೆ. ಗಣಪತಿ, ಯಂ. ಯಂ. ಸೋಮಪ್ಪ, ಕೆ. ಟಿ. ಮೊಣ್ಣಪ್ಪ, ಬಿ. ಪಿ. ಜೋಯಪ್ಪ, ಎ ಜೆ. ಮಂದಣ್ಣ, ಎಂ. ಥಾಮಸ್, ಕೆ. ದೇವಯ್ಯ, ಎಂ. ತಮ್ಮಯ್ಯ, ಕೆ. ಭೀಮ, ಇವರುಗಳು.